ದಿವಸಗಳಲ್ಲಿ ನಿಖರವಾಗಿ ತರುತ್ತೇವೆ, ಪಾಸ್ ಮಾಡುತ್ತೇವೆಂದು ಅವರು ಹೇಳಬೇಕು.

ಉಪಾಧ್ಯಕ್ಷರು : ನಾನು ಇದನ್ನು ಕಾನೂನು ಇಲಾಖೆಗೆ ರೆಫರ್ ಮಾಡಿದ್ದೇನೆ. ಅಲ್ಲಿಂದ ಬಂದ ತಕ್ಷಣ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಅವರು ಹೇಳಿದರು. ಆದ್ದರಿಂದ, ಅವರು ಕಾನೂನು ಇಲಾಖೆಗೆ ಮತ್ತೊಮ್ಮೆ ಒತ್ತಾಯ ಮಾಡಿ ಬೇಗನೆ ಬರಲು ವ್ಯವಸ್ಥೆ ಮಾಡಲಿ.

ಶ್ರೀ ಎಸ್. ಶಿವಾನಂದ ಪಾಟೀಲ್ : ನಾನು ಅವರಲ್ಲಿ ಒಂದು ಸಬ್‌ಮಿಷನ್‌ನ್ನು ಮಾಡುತ್ತೇನೆ.

ಉಪಾಧ್ಯಕ್ಷರು : ಇಲ್ಲಿ ಬೇರೆಯವರು ಮಾತನಾಡಲು ದಯವಿಟ್ಟು ಅವಕಾಶವಿಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ : ಒಂದು ಪಕ್ಷ ಇನ್ನೇನಾದರೂ ಕಾರಣಕ್ಕೆ ಡಿಲೇ ಆಗುವುದಾದರೆ, ಆರ್ಡಿನೆನ್ಸ್ ತಂದು ಇದನ್ನು ಆ್ಯಕ್ಟ್ ಮಾಡುತ್ತಾರೆಯೇ? ಅಷ್ಟನ್ನು ಹೇಳಿದರೆ ಸಾಕು. ರೈತರಿಗೆ ಸಂಬಂಧಪಟ್ಟಂತೆ ಒಂದು ನಿಗದಿಯಾದ ಸಮಯವನ್ನು ಹೇಳಲು ಆಗುತ್ತಿಲ್ಲವಲ್ಲಾ?

ಶ್ರೀ ವಿ. ಮುನಿಯಪ್ಪ : ಅತೀ ಶೀಘ್ರದಲ್ಲೇ ತರುತ್ತೇವೆ.

9) ಶಾಸನ ರಚನೆ

ವಿಧೇಯಕದ ಮಂಡನೆ ಪರ್ಯಾಲೋಚನೆ ಮತ್ತು ಅಂಗೀಕಾರ

ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2003

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, "2003ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು" ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ : "2003ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಮಾನ್ಯ ಉಪಾಧ್ಯಕ್ಷರೆ, 2003ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಕರ್ನಾಟಕ ವಿಧಾನಸಭೆ

ಹನ್ನೊಂದನೇ ವಿಧಾನಸಭೆ

ಆರನೇ ಅಧಿವೇಶನ

ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2003

(2003ರ ವಿಧಾನಸಭೆಯ ವಿಧೇಯಕ ಸಂಖ್ಯೆ 14)

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು (1962ರ ಕರ್ನಾಟಕ ಅಧಿನಿಯಮ 10) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ: